ಅವರು ಬಂದು ಹೋದ್ರು..' ಎಂದು ತುಸು ಕಸಿವಿಸಿಯಿಂದಲೇ ಹೇಳಿ ನನ್ನ ಮುಖವನ್ನು ನೋಡಿದಳು. ನನಗೆ ಆಗಂತುಕನ ನೆನಪು ಮರುಕಳಿಸಿತು. ಮನಸ್ಸು ರೋಸಿಹೋದಂತಾಗಿ 'ಏನಾಗಬೇಕಿತ್ತು ಅವರಿಂದ, ಏನು ಎತ್ತ ಅಂತ ವಿಚಾರಿಸೋದಿಕ್ಕೆ ಆಗಲಿಲ್ಲವಾ..' ಎಂದು ಸಿಡುಕಿದೆ. ಶರಧಿ ತಕ್ಷಣವೇ ಅವಕ್ಕಾದಂತಾಗಿ 'ನಾನೂ ಕೇಳಿದೇರಿ.. ಆ ಪುಣ್ಯಾತ್ಮ ಏನೂ ಬಾಯಿ ಬಿಡಲಿಲ್ಲ.. ಸ್ವಲ್ಪ ಕೆಲಸ ಇತ್ತು ಮೇಡಂ.. ಸುನಿಲ್ ಸಾರನ್ನ ಖುದ್ದಾಗಿ ಭೇಟಿ ಮಾಡ್ಬೇಕಿತ್ತು.. ನಮ್ಮೂರು ಮಳವಳ್ಳಿ.. ಇಲ್ಲೇ ಆವಲಹಳ್ಳಿ ಆರನೇ ಕ್ರಾಸಿನಲ್ಲಿ ನಮ್ಮ ಮನೆ.. ಸಾರ್ ಭಾನುವಾರ ಮನೇಲಿತ್ತಾರಲ್ವಾ ಅಂತ ಅಂದ. ನಾನು ಇರ್ತಾರೆ ಅಂದೆ.. ಸರಿ ಆವತ್ತೇ ಬರ್ತೀನಿ ಅಂತ ಹೇಳಿ ಒಂದು ನಿಮಿಷವೂ ನಿಲ್ಲದೆ ಬಿಳಿ ಹೊಂಡಾ ಆಕ್ಟೀವಾ ಸ್ಕೂಟರಿನಲ್ಲಿ ಹೊರಟುಹೋದ..' ಎಂದು ಮೆಲುದನಿಯಲ್ಲಿ ಉತ್ತರಿಸಿದಳು.

ಅವಳು ಹೇಳಿದ ಮಳವಳ್ಳಿ ಎಂಬ ಹೆಸರು ಕೇಳಿ ನನ್ನ ಮನಸ್ಸಿನಲ್ಲಿ ಫಕ್ಕನೆ ಮಿಂಚೊಂದು ಹೊಳೆದಂತಾಯಿತು. ಶೂ ಬಿಚ್ಚಿ ಒಳಗೆ ಬಂದು 'ಸ್ವಲ್ಪ ಟೀ ಮಾಡಿಕೊಡು..' ಎಂದು ಶರಧಿಗೆ ಹೇಳಿ ಸೋಫಾದಲ್ಲಿ ಒರಗಿ ಕುಳಿತೆ. ಜೇಬಿನಲ್ಲಿದ್ದ ನನ್ನ ವೈಯುಕ್ತಿಕ ಮೊಬೈಲ್ ಫೋನು ರಿಂಗಾಯಿತು. ತೆಗೆದು ನೋಡಿದೆ. ಬಂದ ಕರೆ ಸುಬ್ರಹ್ಮಣ್ಯನದು. ನಾನು ಮೈಸೂರಿನಲ್ಲಿ ಎಂಜನಿಯರಿಂಗ್ ಓದುವಾಗ ಅವನು ನನ್ನ ಸಹಪಾಠಿ ಮತ್ತು ಆತ್ಮೀಯ ಗೆಳೆಯನಾಗಿದ್ದ. ನಾನು ಎಂಜಿನಿಯರಿಂಗ್ ಪದವಿ ಮುಗಿಸಿದ ಬಳಿಕ ಕೆಲಸಕ್ಕೆ ಸೇರಿದೆ. ಅವನು ಹೈದರಾಬಾದಿನ ಕಾಲೇಜೊಂದರಲ್ಲಿ ಎಂ.ಟೆಕ್ ಮುಗಿಸಿ ಅಲ್ಲಿಯೇ ಸಹಾಯಕ ಪ್ರಾಧ್ಯಾಪಕನಾಗಿದ್ದಾನೆ.

ನನ್ನ ಮನಸ್ಸು ಇನ್ನಿಲ್ಲದಂತೆ ತಲ್ಲಣಿಸುತಿತ್ತು. ಕರೆಯನ್ನು ಸ್ವೀಕರಿಸಲಿಲ್ಲ. ಮತ್ತೆ ಅವನೂ ಫೋನು ಮಾಡಲಿಲ್ಲ. ಸೋಫಾದ ಮೇಲೆ ಕುಳಿತು ತಲೆಯನ್ನು ಹಿಂದಕ್ಕೆ ಒರಗಿಸಿ ಹಾಗೆಯೇ ಕಣ್ಣು ಮುಚ್ಚಿಕೊಂಡೆ. ಮನಸ್ಸು ನಾಲ್ಕು ವರ್ಷಗಳ ಹಿಂದಕ್ಕೆ ಜಾರಿ ನೆನಪಿನ ಸುರುಳಿಗಳು ಬಿಚ್ಚಿಕೊಳ್ಳತೊಡಗಿದವು.

* * *

ಆಗಿನ್ನೂ ನಾನು ಕಾರ್ಖಾನೆಯಲ್ಲಿ ಸಹಾಯಕ ವ್ಯವಸ್ಥಾಪಕ ಹುದ್ದೆಯಲ್ಲಿದ್ದೆ. ಈಗಿನಷ್ಟು ಜವಾಬ್ದಾರಿಯಾಗಲೀ, ಕೆಲಸದ ಒತ್ತಡವಾಗಲೀ ಇರಲಿಲ್ಲ. ರಾಜರಾಜೇಶ್ವರಿ ನಗರದಲ್ಲಿ ಒಂದು ಸಿಂಗಲ್ ಬೆಡ್ ರೂಮಿನ ಫ್ಲಾಟಿನಲ್ಲಿ ಬಾಡಿಗೆಗಿದ್ದೆ. ನನ್ನ ತಂದೆ ಮೈಸೂರಿನ ಯಾದವಗಿರಿಯಲ್ಲಿದ್ದ ಖಾಸಗಿ ಕಾರ್ಖಾನೆಯೊಂದರಲ್ಲಿ ಸಾಧಾರಣ ಕಾರ್ಮಿಕನಾಗಿದ್ದರು. ನನ್ನ ತಾಯಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ನನ್ನ ತಂದೆ ತಾಯಿಯರಿಗೆ ನಾನು ಒಬ್ಬನೇ ಮಗ. ಶನಿವಾರ ಕಾರ್ಖಾನೆಯ ಕೆಲಸ ಮುಗಿದ ನಂತರ ನಾನು ಪ್ರತಿವಾರವೂ ಮೈಸೂರಿಗೆ ಹೋಗುತಿದ್ದೆ. ನನ್ನ ತಂದೆಯವರು ಪ್ರತಿ ಸೋಮವಾರ ಬೆಳಗಿನ ಜಾವ ನಾಲ್ಕು ಗಂಟೆಗೆ ಮನೆಯಿಂದ ಸ್ಕೂಟರಿನಲ್ಲಿ ನನ್ನನ್ನು ಬಸ್ ನಿಲ್ದಾಣಕ್ಕೆ ಡ್ರಾಪ್ ಮಾಡುತಿದ್ದರು. ನಾಲ್ಕೂವರೆ ಗಂಟೆಗೆ ಹೊರಡುತಿದ್ದ ಮೈಸೂರು ತಿರುಪತಿ ಬಸ್ಸು ಹತ್ತಿ ಬೆಂಗಳೂರಿಗೆ ಬಂದು ಎಂಟು ಗಂಟೆಗೆ ಸರಿಯಾಗಿ ಕಾರ್ಖಾನೆ ತಲುಪುತಿದ್ದೆ.

ಹೀಗಿರುವಾಗ ಒಂದು ದಿನ ಮೈಸೂರಿನಿಂದ ಹೊರಟ ಬಸ್ಸು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲೆಂದು ಮದ್ದೂರಿನ ಬಸ್ ನಿಲ್ದಾಣದಲ್ಲಿ ನಿಂತಾಗ ಹುಡುಗಿಯೊಬ್ಬಳು ಬಸ್ಸನ್ನು ಹತ್ತಿದವಳು ಖಾಲಿಯಿದ್ದ ನನ್ನ ಸೀಟಿನ ಪಕ್ಕದಲ್ಲಿ ಕುಳಿತಳು. ಆಗಲೇ ಸಮಯ ಬೆಳಗಿನ ಆರು ಗಂಟೆಯಾಗಿತ್ತು. ಚುಮುಚುಮು ಬೆಳಕು ಹರಿಯುತಿತ್ತು. ಬಸ್ಸು ತುಸು ದೂರ ಚಲಿಸುವಷ್ಟರಲ್ಲಿ ಪಕ್ಕದಲ್ಲಿ ಕುಳಿತಿದ್ದ ಹುಡುಗಿ ನಿದ್ರೆಗೆ ಜಾರಿದ್ದಳು. ಮುಚ್ಚಿದ್ದ ಕಿಟಕಿಯ ಗಾಜನ್ನು ಸ್ವಲ್ಪವೇ ತೆರೆದೆ. ತಣ್ಣನೆಯ ಗಾಳಿ ಮೈಸೋಕಿತು. ಕಿಟಕಿಯ ಹೊರಗೆ ರಸ್ತೆಯ ಬದಿಯಲ್ಲಿ ವೇಗವಾಗಿ ಸರಿದು ಹಿಂದಕ್ಕೆ ಹೋಗುತಿದ್ದ ಹಸಿರು ಹೊಲ ಗದ್ದೆಗಳನ್ನು, ಮರಗಿಡಗಳನ್ನೂ ವೀಕ್ಷಿಸುತ್ತಾ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಿಕೊಂಡು ಕುಳಿತಿದ್ದೆ.

ಸ್ವಲ್ಪ ಹೊತ್ತು ಕಳೆದ ನಂತರ ಪಕ್ಕದಲ್ಲಿ ಕುಳಿತಿದ್ದ ಹುಡುಗಿಯ ತಲೆ ನನ್ನ ಬಲಭುಜದ ಮೇಲೆ ಒರಗಿದುದು ಸ್ಪರ್ಶ ಸಂವೇದನೆಯಿಂದ ತಿಳಿಯಿತು. ತುಸು ಇರಿಸು ಮುರಿಸೂ ಆಯಿತು. ಕಿಟಕಿಯ ಕಡೆಯಿದ್ದ ನನ್ನ ಮುಖವನ್ನು ಅವಳ ಕಡೆಗೆ ತಿರುಗಿಸಿ ಮೊದಲ ಬಾರಿಗೆ ಅವಳನ್ನು ದಿಟ್ಟಿಸಿ ನೋಡಿದೆ. ಅಪೂರ್ವ ಸೌಂದರ್ಯವತಿ ಎನ್ನವುದು ಮೊದಲ ನೋಟದಲ್ಲಿಯೇ ಮನದಟ್ಟಾಯಿತು. ಕೋಲುಮುಖ, ನೀಳನಾಸಿಕ, ದಟ್ಟಕಪ್ಪು ರೇಶಿಮೆಯಂತಹ ತಲೆಕೂದಲಿನಿಂದ ನವಿರಾದ ಹಣೆಯ ಮೇಲೆ ಇಳಿಬಿದ್ದು ಕಿಟಕಿಯಿಂದ ಬರುತಿದ್ದ ತಣ್ಣನೆಯ ಗಾಳಿಗೆ ಲಾಸ್ಯವಾಡುತಿದ್ದ ಮುಂಗುರುಳು. ಕೆಂಗುಲಾಬಿಯ ಮೊಗ್ಗಿನಂತೆ ತುಸು ಉಬ್ಬಿದ ತುಟಿಗಳು, ಹಾಲಿನ ಕೆನೆಯಂತಹ ಮೈಬಣ್ಣ, ಉದ್ದನೆಯ ಸಪೂರ ಕೈಬೆರಳುಗಳು.. ಯಾಕೋ ಏನೋ ನನ್ನ ಭುಜಕ್ಕೊರಗಿದ್ದ ಅವಳ ತಲೆಯನ್ನು ಅತ್ತ ಜರುಗಿಸುವ ಮನಸ್ಸಾಗಲಿಲ್ಲ. ಮುಂದೆ ಸಂಭವಿಸಿದ ಘಟನೆಗಳನ್ನು ನೆನಪಿಸಿಕೊಂಡರೆ ನಾನು ಮಾಡಿದ ಮೊದಲ ತಪ್ಪು ಅದೇ ಇರಬಹುದು ಎನಿಸುತ್ತದೆ.

ಸ್ವಲ್ಪ ಹೊತ್ತಿನ ನಂತರ ಹುಡುಗಿಗೆ ಎಚ್ಚರವಾಯಿತು. ನನ್ನ ಭುಜದ ಮೇಲಿದ್ದ ತಲೆಯನ್ನು ತೆಗೆದು 'ಸಾರಿ ಸಾರ್..' ಎಂದು ಮೆಲ್ಲಗೆ ಉಲಿದಳು. ನಾನು ಅವಳತ್ತ ನೋಡಿ ಸೌಜನ್ಯಕ್ಕಾಗಿ ಒಂದು ಮುಗುಳ್ನಗೆ ಬಿಸಾಕಿ ಮತ್ತೆ ಕಿಟಕಿಯ ಹೊರಗೆ ದೃಷ್ಟಿ ಹರಿಸಿ ಕುಳಿತೆ.

'ನೀವು ಮೈಸೂರಿನವರಾ ಸಾರ್..' ಅದೇ ಮೆಲುದನಿ.

ನಾನು ಸ್ವಭಾವತಃ ತುಸು ಬಿಗುಮಾನದ ಪ್ರವೃತ್ತಿಯನು. ಅಪರಿಚಿತರೊಂದಿಗೆ ಮಾತು ಎಂದರೆ ಎಂತಹುದೋ ಮುಜುಗರ. ಕಿಟಕಿಯಿಂದ ಹೊರಗೆ ನೋಡುತ್ತಲೇ ಸುಮ್ಮನೆ ಹೂಂಗುಟ್ಟಿದೆ.

'ಬೆಂಗಳೂರಿನಲ್ಲಿದೀರಾ ಸಾರ್..'

ಮತ್ತೆ ಹೂಂಗುಟ್ಟಿದೆ.

'ನಾನೂ ಬೆಂಗಳೂರಿನಲ್ಲಿದೀನಿ ಸಾರ್.. ನಮ್ಮೂರು ಮಳವಳ್ಳಿ.. ಕೆಂಗೇರಿ ಹತ್ತಿರ ಇರೋ ಏಂಜೆಲ್ಸ್ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡ್ತಾ ಇದೀನಿ..'

ಈ ಬಾರಿ ಸುಮ್ಮನೆ ಹೂಂಗುಟ್ಟುವುದು ಸಾಧ್ಯವಾಗದೆ ಅವಳತ್ತ ತಿರುಗಿ 'ಹೌದಾ..' ಎಂದೆ.

'ನೀವು ಎಲ್ಲಿ ಕೆಲಸ ಮಾಡೋದು ಸಾರ್.'

ನಾನು ಕೆಲಸ ಮಾಡುತಿದ್ದ ಕಾರ್ಖಾನೆಯ ಹೆಸರು ಹೇಳಿ ಅಲ್ಲಿ ಅಸಿಸ್ಟೆಂಟ್ ಮ್ಯಾನೇಜರನಾಗಿದ್ದೇನೆ ಎಂದು ತಿಳಿಸಿದೆ. ಹುಡುಗಿ ತುಸು ಹೊತ್ತು ಸುಮ್ಮನೆ ಕುಳಿತಳು. ಬಸ್ಸು ವೇಗವಾಗಿ ಮುಂದೆ ಸಾಗುತಿತ್ತು. ನಾನು ಮತ್ತೆ ಕಿಟಕಿಯ ಹೊರಗೆ ನೋಡುತ್ತಾ ಕುಳಿತೆ.

'ನನ್ನ ಹೆಸರು ಹೇಮಾವತಿ ಅಂತ.. ನಿಮ್ಮ ಹೆಸರು ಸಾರ್..' ಹುಡುಗಿ ಮತ್ತೆ ಮಾತನಾಡಿದಳು.

ವಿಧಿಯಿಲ್ಲದೆ ಮತ್ತೆ ಅವಳತ್ತ ತಿರುಗಿ 'ಸುನಿಲ್ ಕುಮಾರ್..' ಎಂದು ಉತ್ತರಿಸಿದೆ.

'ನಾನು ಪಿಯುಸಿ ಓದಿದೀನಿ ಸಾರ್.. ಮನೆಯಲ್ಲಿ ತುಂಬಾ ಪ್ರಾಬ್ಲೆಮ್ ಇತ್ತು.. ಮುಂದೆ ಓದೋದಿಕ್ಕಾಗಲಿಲ್ಲ.. ಅದಕ್ಕೆ ಗಾರ್ಮೆಂಟ್ಸಿಗೆ ಹೋಗ್ತಾ ಇದೀನಿ.. ಎರಡು ವರ್ಷ ಆಯ್ತು.. ನೀವು ಏನು ಓದಿದೀರಾ ಸಾರ್..?'

'ಬಿ.ಇ. ಓದಿದೀನಿ..'

'ಓ.. ನೀವು ಇಂಜಿನಿಯರ್ರಾ..' ಅವಳ ಧ್ವನಿಯಲ್ಲಿ ಆಶ್ಚರ್ಯದ ಜೊತೆ ಎಂತಹುದೋ ಸಂತಸವಿತ್ತು. ಶುಭ್ರ ಕೊಳಗಳಂತಿದ್ದ ಕಣ್ಣುಗಳಲ್ಲಿ ಹೊಳಪು ಮೂಡಿತ್ತು. ನಾನು ಸುಮ್ಮನೆ ಮುಗುಳ್ನಕ್ಕೆ. ಅವಳು ನೀಡಿದ ವಿವರಗಳಿಂದ ಅವಳು ಇಪ್ಪತ್ತರ ಆಸುಪಾಸಿನ ವಯಸ್ಸಿನ ಹುಡುಗಿಯಿರಬಹುದು ಎನಿಸಿತು.

'ನನಗೂ ತುಂಬಾ ಓದಬೇಕು ಅಂತ ಆಸೆಯಿತ್ತು ಸಾರ್.. ಆದರೆ ನಮ್ಮ ತಂದೆ ಟೈಲರ್ ಕೆಲಸ ಮಾಡ್ತಾ ಇದ್ರು.. ಇದ್ದಕಿದ್ದಂಗೆ ಕಾಯಿಲೆ ಬಿದ್ದುಬಿಟ್ಟರು.. ಈಗ ಅವರಿಗೆ ಕೆಲಸ ಮಾಡೋದಿಕ್ಕೆ ಆಗ್ತಾ ಇಲ್ಲಾ.. ನಮ್ಮ ತಾಯೀನೆ ಬಟ್ಟೆ




## ಗ್ರಹಣ

ಶಿಸ್ತಿನ ಸಿಪಾಯಿ
ಸೂರ್ಯನೂ
ಒಮ್ಮೊಮ್ಮೆ
ಆಲಸಿಯಾಗಿ
ಮುಸುಕು ಹೊದ್ದು
ಮಲಗಿಬಿಡುತ್ತಾನೆ!

★ ಕೆ ಬಿ.ರಂಗಸ್ವಾಮಿ